**[Govt. of Karnataka** **C.R.P. 67]**

| |
|---|
| **Deposition Sheets (RP.No.57)** |
| **Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1374/2019**

ಪಿ.ಡಬ್ಲ್ಯು ಃ 5 ಸಿ.ಡಬ್ಲ್ಯು ಃ 7

ಸಾಕ್ಷಿದಾರನ ಹೆಸರು ಃ ಗಣಪತಿ ಹೆಗ್ಡೆ
ತಂದೆಯ ಹೆಸರು ಃ ಲಕ್ಷ್ಮಣ ಹೆಗ್ಡೆ
ಪ್ರಾಯ ಃ 63 ವರ್ಷ
ಉದ್ಯೋಗ ಃ ವ್ಯಾಪಾರ
ವಾಸ ಃ ಕಾರ್ಕಳ

ದಿನಾಂಕ 24-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಆರೋಪಿ ಪರಿಚಯವಿರುದಿಲ್ಲ.

ನನ್ನ ಹೆಸರಿನಲ್ಲಿ ಕಾರ್ಕಳ ತಾಲೂಕು, ಕಸಬಾ ಗ್ರಾಮದ, ಕಾರ್ಲ ಕಾಂಪ್ಲೆಕ್ಸ್ ಕಟ್ಟಡದಲ್ಲಿ ಅಂಗಡಿ ಕೋಣೆ ಇದೆ, ಅದರ ಕಟ್ಟಡ ನಂಬರ್ 185/7 ಆಗಿರುತ್ತದೆ. ಸದ್ರಿ ಅಂಗಡಿ ಕೋಣೆ ಕಾಲಿ ಇದ್ದು, ಯಾರಿಗೂ ಬಾಡಿಗೆ ಕೊಟ್ಟಿರುವುದಿಲ್ಲ. ಹರೀಶ್ ಶೆಟ್ಟಿ ಎಂಬುವವರು ನನ್ನ ಹೆಸರಿನ ಕಟ್ಟಡದಲ್ಲಿ ತಮ್ಮ ಸ್ವಂತ ಲಾಭಕ್ಕೋಸ್ಕರ ಯವುದೇ ಪರವಾನಿಗೆ ಇಲ್ಲದೇ ಹೋಟೇಲ್ ನಲ್ಲಿ ಅಕ್ರಮವಾಗಿ ಮಧ್ಯವನ್ನು ದಾಸ್ತಾನು ಇಟ್ಟಿರುವುದಿಲ್ಲ. ಸದ್ರಿ ಹರೀಶ್ ಶೆಟ್ಟಿ ಹೋಟೇಲ್ ಗೆ ಬರುತಿದ್ದ ಗ್ರಾಹಕರಿಗೆ ಮಧ್ಯವನ್ನು ಅಕ್ರಮವಾಗಿ ಊಟದೊಂದಿಗೆ ಸರಬರಾಜು ಮಾಡುತ್ತಿರಲಿಲ್ಲ. ದಿಃ 23-02-2019 ರಂದು ಪೋಲಿಸರು ನನ್ನ ಹೆಸರಿನ ಅಂಗಡಿಗೆ ದಾಳಿ ಮಾಡಿರುವುದಿಲ್ಲ. ಅಲ್ಲದೇ ಯಾವುದೇ ಮಧ್ಯ ತುಂಬಿದ ಬಾಟಲಿಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ಘಟನೆ ಕುರಿತು ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲು ః ಸಹಾಯಕ ಸರ್ಕಾರಿ ಅಭಿಯೋಜಕರುಃ-

ನನ್ನ ಮಾಲೀಕತ್ವದ ಕಟ್ಟಡ ನಂಬರ್ 185/7 ನ್ನು ಆರೋಪಿಗೆ ಹೋಟೇಲ್ ವ್ಯವಹಾರ ಮಾಡಲು ಬಾಡಿಗೆ ಕರಾರು ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಹರೀಶ್ ಶೆಟ್ಟಿ ನನ್ನ ಹೆಸರಿನ ಕಟ್ಟಡದಲ್ಲಿ ತಮ್ಮ ಸ್ವಂತ ಲಾಭಕ್ಕೋಸ್ಕರ ಯವುದೇ ಪರವಾನಿಗೆ ಇಲ್ಲದೇ ಹೋಟೇಲ್ ನಲ್ಲಿ ಅಕ್ರಮವಾಗಿ ಮಧ್ಯವನ್ನು ದಾಸ್ತಾನು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಹರೀಶ್ ಶೆಟ್ಟಿ ಹೋಟೇಲ್ ಗೆ ಬರುತಿದ್ದ ಗ್ರಾಹಕರಿಗೆ ಮಧ್ಯವನ್ನು ಅಕ್ರಮವಾಗಿ ಊಟದೊಂದಿಗೆ ಸರಬರಾಜು ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಿಃ 23-02-2019 ರಂದು ಪೋಲಿಸರು ನನ್ನ ಹೆಸರಿನ ಅಂಗಡಿಗೆ ದಾಳಿ ಮಾಡಿ, ಮಧ್ಯ ತುಂಬಿದ ಬಾಟಲಿಗಳನ್ನು ಆರೋಪಿಯಿಂದ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಕುರಿತು ನಾನು ಪೋಲಿಸರಿಗೆ ದಿಃ 11-04-2019 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ః ಆರೋಪಿತರ ಪರ ః ಶ್ರೀ ಬಿ.ಎಮ್.ಎಸ್ ವಕೀಲರಿಂದ ಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ